# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 358

ಸದಸ್ಯರ ಹೆಸರು : ಶ್ರೀ ಚಿದಾನಂದ ಎಂ. ಗೌಡ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 11.12.2024

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಶಕ್ತಿ ಯೋಜನೆ ಜಾರಿಯಾದ ನಂತರ ರಾಜ್ಯದ ಸಾರಿಗೆ ಬಸ್‌ಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೆಚ್ಚಾದ ಪ್ರಯಾಣಿಕರ ಸಂಖ್ಯೆ ಎಷ್ಟು; (ವಿಭಾಗವಾರು ವಿವರ ನೀಡುವುದು)</td><td>ರಾಜ್ಯದಲ್ಲಿ ಶಕ್ತಿ ಯೋಜನೆ ಅನುಷ್ಠಾನದಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ದಿನ ನಿತ್ಯ ಹೆಚ್ಚಾಗಿರುವ ಪ್ರಯಾಣಿಕರ ನಿಗಮವಾರು ಸಂಖ್ಯೆ ಕೆಳಕಂಡಂತಿದ್ದು, ವಿಭಾಗವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ:
<table>
<tr><th colspan="4">ಸರಾಸರಿ ಪ್ರಯಾಣಿಕರ ಸಂಖ್ಯೆ (ಲಕ್ಷಗಳಲ್ಲಿ)</th></tr>
<tr><th>ನಿಗಮ</th><th>ಶಕ್ತಿ ಯೋಜನೆ ಪೂರ್ವ</th><th>ಶಕ್ತಿ ಯೋಜನೆ ನಂತರ</th><th>ಸರಾಸರಿ ಹೆಚ್ಚಳ</th></tr>
<tr><td>ಕ.ರಾ.ರ.ಸಾ.ನಿಗಮ</td><td>29.72</td><td>34.79</td><td>5.07</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>33.67</td><td>40.00</td><td>6.33</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>16.49</td><td>24.87</td><td>8.38</td></tr>
<tr><td>ಕ.ಕ.ರ.ಸಾ.ನಿಗಮ</td><td>13.58</td><td>16.97</td><td>3.39</td></tr>
<tr><td>ಒಟ್ಟು</td><td>93.46</td><td>116.63</td><td>23.17</td></tr>
</table>
</td></tr>
<tr><td>ಆ.</td><td>ರಾಜ್ಯದ ಸಾರಿಗೆ ಸಂಸ್ಥೆಯಲ್ಲಿ ಮಂಜೂರಾದ ವಾಹನ ಚಾಲಕರು ಹಾಗೂ ನಿರ್ವಾಹಕರುಗಳ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳೆಷ್ಟು;</td><td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಯಲ್ಲಿ ಅಕ್ಟೋಬರ್-2024ರ ಅಂತ್ಯಕ್ಕೆ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ವಾಹನ ಚಾಲಕರು ಹಾಗೂ ನಿರ್ವಾಹಕರುಗಳ ಹುದ್ದೆಗಳ ಸಂಖ್ಯೆ ಕೆಳಗಿನಂತಿರುತ್ತದೆ:
<table>
<tr><th>ಹುದ್ದೆ</th><th>ಮಂಜೂರಾದ ಹುದ್ದೆಗಳು</th><th>ಕಾರ್ಯ ನಿರ್ವಹಣೆ</th><th>ಖಾಲಿ ಹುದ್ದೆಗಳು</th></tr>
<tr><td colspan="4">ಕ.ರಾ.ರ.ಸಾ.ನಿಗಮ</td></tr>
<tr><td>ಚಾಲಕ</td><td>14245</td><td>7961</td><td>6284</td></tr>
<tr><td>ನಿರ್ವಾಹಕ</td><td>12587</td><td>1950</td><td>10637</td></tr>
<tr><td>ಚಾಲಕ-ಕಂ-ನಿರ್ವಾಹಕ</td><td>--</td><td>13791</td><td>+13791</td></tr>
<tr><td colspan="4">ಬೆಂ.ಮ.ಸಾ.ಸಂಸ್ಥೆ</td></tr>
<tr><td>ಚಾಲಕ</td><td>11289</td><td>10278</td><td>1011</td></tr>
<tr><td>ನಿರ್ವಾಹಕ</td><td>13340</td><td>3710</td><td>9630</td></tr>
</table>
</td></tr>
</table>

| | | | |
|---|---|---|---|
| ಚಾಲಕ- ಕಂ-ನಿರ್ವಾಹಕ | -- | 8403 | -- |
| ವಾ.ಕ.ರ.ಸಾ.ಸಂಸ್ಥೆ | | | |
| ಚಾಲಕ | 7922 | 2492 | 5430 |
| ನಿರ್ವಾಹಕ | 7531 | 3953 | 3578 |
| ಚಾಲಕ-ಕಂ-ನಿರ್ವಾಹಕ | -- | 8278 | -- |
| ಕ.ಕ.ರ.ಸಾ.ನಿಗಮ | | | |
| ಚಾಲಕ | 5687 | 5385 | 302 |
| ನಿರ್ವಾಹಕ | 2952 | 916 | 2036 |
| ಚಾಲಕ-ಕಂ-ನಿರ್ವಾಹಕ | 5460 | 7243 | 1783 |

ನಾಲ್ಕೂ ಸಾರಿಗೆ ನಿಗಮಗಳಲ್ಲಿ 9000 ಚಾಲನಾ ಸಿಬ್ಬಂದಿಗಳ ನೇಮಕಾತಿಗೆ ಸರ್ಕಾರ ಅನುಮತಿ ನೀಡಿದ್ದು, ಕ.ಕ.ರ.ಸಾ.ನಿಗಮದಲ್ಲಿ 1583 ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ಹಾಗೂ ಬೆಂ.ಮ.ಸಾ.ಸಂಸ್ಥೆಯಲ್ಲಿ 2000 ನಿರ್ವಾಹಕರನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿದೆ. ಕ.ರಾ.ರ.ಸಾ.ನಿಗಮ ಹಾಗೂ ವಾ.ಕ.ರ.ಸಾ.ನಿಗಮದಲ್ಲಿ ದಾಖಲಾತಿ ಪರಿಶಿಲನೆ ಮುಗಿದಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿದೆ. ನಾಲ್ಕೂ ನಿಗಮಗಳು ಸೇರಿ ಇತರೆ 1012 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಇ. ಕಳೆದ 2 ವರ್ಷಗಳಲ್ಲಿ ಎಷ್ಟು ಹೊಸ ಬಸ್‌ಗಳನ್ನು ಖರೀದಿ ಮಾಡಲಾಗಿದೆ ಮತ್ತು ಎಷ್ಟು ವಾಹನ ಚಾಲಕರು ಮತ್ತು ನಿರ್ವಾಹಕರನ್ನು ನೇಮಕ ಮಾಡಲಾಗಿದೆ.

ಸಾರಿಗೆ ಸಂಸ್ಥೆಗಳಿಂದ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ.

2023-24 ಹಾಗೂ 2024-25ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಲ್ಲಿ ಖರೀದಿಸಲಾದ ಬಸ್‌ಗಳ ವಿವರ ಕೆಳಗಿನಂತಿರುತ್ತದೆ:

| ಸಂಸ್ಥೆ | ಸೇರ್ಪಡೆ ಯಾದ ಬಸ್ ಗಳ ಸಂಖ್ಯೆ | ಸೇರ್ಪಡೆಗೊಳಿಸ ಲಾಗುತ್ತಿರುವ ಬಸ್‌ಗಳ ಸಂಖ್ಯೆ |
|---|---|---|
| ಕ.ರಾ.ರ.ಸಾ.ನಿಗಮ | 1118 | 20 |
| ಬೆಂ.ಮ.ಸಾ.ಸಂಸ್ಥೆ | 1510 | 699 |
| ವಾ.ಕ.ರ.ಸಾ.ಸಂಸ್ಥೆ | 662 | 554 |
| ಕ.ಕ.ರ.ಸಾ.ನಿಗಮ | 1014 | 73 |
| **ಒಟ್ಟು** | **4304** | **1346** |

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಮತ್ತು ಉಳಿದ ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.**

ಆದರೆ, ಪ್ರಸ್ತುತ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ **ಕಳೆದ 02 ವರ್ಷಗಳಲ್ಲಿ ನೇಮಕಾತಿ ಮಾಡಲಾದ ವಿವರ ಕೆಳಗಿನಂತಿದೆ:**

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:**

ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆಯ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಲಾಗಿದೆ. ಅಲ್ಲದೇ, ಚಾಲಕ-ಕಂ-ನಿರ್ವಾಹಕ ಹುದ್ದೆಯು ಒಳಗೊಂಡಂತೆ ಇತರೆ 194 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**

ಸಂಸ್ಥೆಯಲ್ಲಿ ಕೋವಿಡ್ ನಂತದಲ್ಲಿ 2500 ನಿರ್ವಾಹಕ, ದರ್ಜೆ-3 ಹುದ್ದೆಯ ಮೂಲ ದಾಖಲಾತಿ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಅಲ್ಲದೇ, ಅನುಕಂಪದ ಆಧಾರದ ಮೇಲೆ ಚಾಲಕ /ನಿರ್ವಾಹಕರು ಒಳಗೊಂಡಂತೆ ಒಟ್ಟಾರೆಯಾಗಿ 306 ವಿವಿದ ವೃಂದದ ಹುದ್ದೆಗಳಿಗೆ ನೇಮಕ ಮಾಡಲಾಗಿದೆ.

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:**

ಈಗಾಗಲೇ 2000 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದ್ದು, ಅದರಂತೆ, 1000 ಚಾಲನಾ ಹುದ್ದೆಯ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಲಾಗಿದೆ. ಸದರಿ ನೇಮಕಾತಿ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಉಳಿದ 1000 ಚಾಲನಾ ಸಿಬ್ಬಂದಿಗಳ ನೇಮಕಾತಿಗಾಗಿ ಜಾಹಿರಾತು ಹೊರಡಿಸಲಾಗುವುದು. ಅಲ್ಲದೇ ಚಾಲಕ-ಕಂ-ನಿರ್ವಾಹಕ ಹುದ್ದೆಯು ಒಳಗೊಂಡಂತೆ ಇತರೆ ಒಟ್ಟು 391 ವಿವಿಧ ವೃಂದಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಚಾಲನಾ ಸಿಬ್ಬಂದಿಗಳ ಕೊರತೆ ನೀಗಿಸಲು ಹೊರಗುತ್ತಿಗೆ ಆಧಾರದ ಮೇಲೆ 400 ಚಾಲಕರನ್ನು ಪಡೆಯಲಾಗಿದೆ. ಇನ್ನೂ 500 ಚಾಲಕರನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ.

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:**

ಪ್ರಸ್ತುತ 1583 ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಇತರೆ 121 ವಿವಿಧ ವೃಂದದ ಹುದ್ದೆಗಳನ್ನು

| | | |
|---|---|---|
| | | ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. |
| ಈ. | ಪ್ರಯಾಣಿಕರ ಸಂಖ್ಯೆ ಹೆಚ್ಚಾದ ಕಾರಣ ಇವರುಗಳ ಮೇಲೆ ಒತ್ತಡ ಹೆಚ್ಚಾಗುತ್ತಿದ್ದು ಸಿಬ್ಬಂದಿಗಳ ಮೇಲೆ ಹಲ್ಲೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ, ಇವರ ಮೇಲಿನ ಒತ್ತಡ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು. | ಸಂಸ್ಥೆಯು ಚಾಲನ ಸಿಬ್ಬಂದಿಗಳ ಒತ್ತಡವನ್ನು ಕಡಿಮೆ ಮಾಡಲು ಕೆಳಕಂಡಂತೆ ಕ್ರಮಗಳನ್ನು ಕೈಗೊಂಡಿರುತ್ತದೆ.<br><br>**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:**<br>• ನಿಗಮದಲ್ಲಿ UPI ಪಾವತಿ ಮೂಲಕ ಟಿಕೇಟ ವಿತರಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು, ಸದರಿ ಡಿಜಿಟಲ್ ಪೇಮೆಂಟ್ ವ್ಯವಸ್ಥೆಯಿಂದಾಗಿ ಚಿಲ್ಲರೆ ಸಮಸ್ಯೆ ನಿವಾರಣೆಗೆ ಸಹಾಯಕಾರಿಯಾಗಿದೆ.<br>• ಸಂಸ್ಥೆಯ ಸಿಬ್ಬಂದಿಯ ಮೇಲಿನ ಹಲ್ಲೆ ಪ್ರಕರಣಗಳಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br>• ಸಂಚಾರ ಪೊಲೀಸ್ ಇಲಾಖೆ ಹಾಗೂ ಇನ್ನಿತರೆ ಸಂಪನ್ಮೂಲ ವ್ಯಕ್ತಿಗಳ ಸಹಯೋಗದೊಂದಿಗೆ ಸಂಸ್ಥೆಯ ಚಾಲಕರಿಗೆ ರಸ್ತೆ ಸುರಕ್ಷತಾ ಕ್ರಮಗಳ ಕುರಿತು ತರಬೇತಿ ನೀಡಲಾಗುತ್ತಿದೆ.<br>• ನಿಗಮದ ಘಟಕ ಮಟ್ಟದಲ್ಲಿ ನಿಗಮದ ಸಿಬ್ಬಂದಿಗಳಿಗೆ ಸಾರ್ವಜನಿಕ ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸುವ ಬಗ್ಗೆ ತಿಳಿವಳಿಕೆ ನೀಡಲಾಗುತ್ತಿದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**<br>• ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಲಕ ಮತ್ತು ನಿರ್ವಾಹಕರ ಮೇಲಿನ ಒತ್ತಡ ನಿವಾರಣೆಗೆ ಸೂಕ್ತ ಆಪ್ತ ಸಮಾಲೋಚನೆಯನ್ನು ನುರಿತ ತಜ್ಞರಿಂದ ನಡೆಸಲಾಗುತ್ತಿದೆ.<br>• ಸಂಸ್ಥೆಯ ಸಾರಿಗೆಗಳ ಆಚರಣೆ ವೇಳೆಯನ್ನು ವೈಜ್ಞಾನಿಕ ಕಾರ್ಯಾಚರಣೆ ಸಮಯಕ್ಕನುಗುಣವಾಗಿ ಹೆಚ್ಚಿಸಿ ಪರಿಷ್ಕರಣೆ ಮಾಡಲಾಗುತ್ತಿದೆ.<br>• ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಸಂಸ್ಥೆಯ ಚಾಲಕರಿಗೆ ರಸ್ತೆ ಸುರಕ್ಷತಾ ಕ್ರಮಗಳ ಕುರಿತು ತರಬೇತಿ ನೀಡಲಾಗುತ್ತಿದೆ.<br>• ಸಂಸ್ಥೆಯ ಮಾನವ ಸಂಪನ್ಮೂಲ ಇಲಾಖೆಯಿಂದ ನುರಿತ ತರಬೇತಿದಾರರ ಮೂಲಕ ಚಾಲನಾ ಸಿಬ್ಬಂದಿಗಳಿಗೆ ಪುನಶ್ಚೇತನ ತರಬೇತಿ ನೀಡಲಾಗುತ್ತಿದೆ.<br>• ಸಂಸ್ಥೆಯ ಸಿಬ್ಬಂದಿಗಳ ಆರೋಗ್ಯ ಹಿತದೃಷ್ಟಿಯಿಂದ ಜಯದೇವ ಹೃದ್ರೋಗ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು, ಸಿಬ್ಬಂದಿಗಳ ಆರೋಗ್ಯ ತಪಾಸಣೆಯನ್ನು ಮಾಡಿಸಲಾಗುತ್ತಿದೆ. |

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:**

- ಸಂಸ್ಥೆಯ ಬಸ್‌ಗಳಲ್ಲಿ UPI ಪಾವತಿ ಮೂಲಕ ಟಿಕೇಟ ವಿತರಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಸದರಿ ಡಿಜಿಟಲ್ ಪೇಮೆಂಟ ವ್ಯವಸ್ಥೆಯಿಂದಾಗಿ ಚಿಲ್ಲರೆ ಸಮಸ್ಯೆ ನಿವಾರಣೆಗೆ ಸಹಾಯಕಾರಿಯಾಗಿದೆ.
- "ಸಂಸ್ಥೆಯ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡುವುದು ಮತ್ತು ಕರ್ತವ್ಯಕ್ಕೆ ಅಡ್ಡಿಪಡಿಸುವುದು ಕಾನೂನು ರೀತಿ ಶಿಕ್ಷಾರ್ಹ ಅಪರಾಧವಾಗಿದೆ" ಎಂಬ ಅಂಶದ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕ, ಬಸ್ ಗಳಲ್ಲಿ ಹಾಗೂ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ.
- ಸಿಬ್ಬಂದಿಗಳ ಮೇಲೆ ಹಲ್ಲೆಯಾದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸೂಕ್ತ ನಿರ್ದೇಶನಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳು, ಘಟಕ ವ್ಯವಸ್ಥಾಪಕರು, ಸಂಚಾರ ಮೇಲ್ವಿಚಾರಕರು ಮತ್ತು ಚಾಲನಾ ಸಿಬ್ಬಂದಿಗಳಿಗೆ ಗೆ ನೀಡಲಾಗಿರುತ್ತದೆ.

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:**

- ನಿಗಮದ ಸಾರಿಗೆಗಳ ಆಚರಣೆ ವೇಳೆಯನ್ನು ವೈಜ್ಞಾನಿಕ ಕಾರ್ಯಾಚರಣೆ ಸಮಯಕ್ಕನುಗುಣವಾಗಿ ಸುತ್ತೋಲೆಯನ್ವಯ ಪರಿಷ್ಕರಣೆ ಮಾಡಲಾಗುತ್ತಿದೆ.
- ಸಿಬ್ಬಂದಿಗಳ ಮೇಲೆ ಹಲ್ಲೆಯಾದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸೂಕ್ತ ನಿರ್ದೇಶನಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳು, ಘಟಕ ವ್ಯವಸ್ಥಾಪಕರು, ಸಂಚಾರ ಮೇಲ್ವಿಚಾರಕರು ಮತ್ತು ಚಾಲನಾ ಸಿಬ್ಬಂದಿಗಳಿಗೆ ನೀಡಲಾಗಿರುತ್ತದೆ.

ಊ. ಕಳೆದ ಐದು ವರ್ಷಗಳಲ್ಲಿ ಕರ್ತವ್ಯ ನಿರ್ವಹಿಸುವಾಗಲೇ ಮರಣ ಹೊಂದಿದ ವಾಹನ ಚಾಲಕರು ಮತ್ತು ನಿರ್ವಾಹಕರುಗಳ ಸಂಖ್ಯೆ ಎಷ್ಟು? (ವರ್ಷವಾರು ವಿವರ ನೀಡುವುದು)

ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಕಳೆದ ಐದು ವರ್ಷಗಳಲ್ಲಿ ಕರ್ತವ್ಯ ನಿರ್ವಹಿಸುವಾಗಲೇ ಮರಣ ಹೊಂದಿದ ವಾಹನ ಚಾಲಕರು ಮತ್ತು ನಿರ್ವಾಹಕರುಗಳ ವಿವರ ಕೆಳಗಿನಂತಿರುತ್ತದೆ:

| ಕ.ರಾ.ರ.ಸಾ.ನಿಗಮ | | | | | |
|---|---|---|---|---|---|
| **ಹುದ್ದೆ** | **2020** | **2021** | **2022** | **2023** | **2024** |
| ಚಾಲಕ | 2 | 2 | 2 | 2 | 0 |
| ನಿರ್ವಾಹಕ | 0 | 2 | 3 | 2 | 3 |
| ಚಾ/ನಿ | 0 | 0 | 0 | 1 | 0 |
| ಒಟ್ಟು | 2 | 4 | 5 | 5 | 3 |

| | | | | | |
|---|---|---|---|---|---|
| ಬೆಂ.ಮ.ಸಾ.ಸಂಸ್ಥೆ | | | | | |
| ಚಾಲಕ | 0 | 0 | 2 | 1 | 1 |
| ನಿರ್ವಾಹಕ | 0 | 0 | 1 | 2 | 0 |
| ಚಾ/ನಿ | 0 | 0 | 0 | 0 | 0 |
| ಒಟ್ಟು | 0 | 0 | 3 | 3 | 1 |
| ವಾ.ಕ.ರ.ಸಾ.ಸಂಸ್ಥೆ | | | | | |
| ಚಾಲಕ | 0 | 1 | 2 | 2 | 2 |
| ನಿರ್ವಾಹಕ | 0 | 1 | 0 | 0 | 0 |
| ಚಾ/ನಿ | 0 | 0 | 0 | 1 | 2 |
| ಒಟ್ಟು | 0 | 2 | 2 | 3 | 4 |
| ಕ.ಕ.ರ.ಸಾ.ನಿಗಮ | | | | | |
| ಚಾಲಕ | 48 | 42 | 29 | 31 | 25 |
| ನಿರ್ವಾಹಕ | 17 | 23 | 10 | 06 | 05 |
| ಚಾ/ನಿ | 36 | 39 | 27 | 32 | 28 |
| ಒಟ್ಟು | 101 | 104 | 66 | 69 | 58 |

ಸಂಖ್ಯೆ: ಟಿಡಿ 217 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ

ಪ್ರಯಾಣಿಕರ ಮಾಹಿತಿ (ಲಕ್ಷಗಳಲ್ಲಿ)

| ಕ.ರಾ.ರ.ಸಾ.ನಿಗಮ | | | |
|---|---|---|---|
| ವಿಭಾಗ | ಶಕ್ತಿ ಪೂರ್ವ | ಶಕ್ತಿ ನಂತರ | ಹೆಚ್ಚಳ |
| ಬೆಂಗಳೂರು (ಕೇ) | 0.75 | 0.85 | 0.10 |
| ರಾಮನಗರ | 1.49 | 3.20 | 1.71 |
| ತುಮಕೂರು | 2.07 | 2.95 | 0.88 |
| ಕೋಲಾರ | 2.12 | 2.63 | 0.51 |
| ಚಿಕ್ಕಬಳ್ಳಾಪುರ | 2.18 | 2.48 | 0.30 |
| ಮೈಸೂರು(ನ) | 0.00 | 3.99 | 3.99 |
| ಮೈಸೂರು(ಗ್ರಾ) | 6.14 | 2.16 | -3.98 |
| ಮಂಡ್ಯ | 2.20 | 2.96 | 0.76 |
| ಚಾಮರಾಜನಗರ | 1.74 | 1.99 | 0.25 |
| ಹಾಸನ | 3.09 | 2.21 | -0.88 |
| ಚಿಕ್ಕಮಗಳೂರು | 1.61 | 1.97 | 0.36 |
| ಮಂಗಳೂರು | 1.15 | 1.53 | 0.38 |
| ಪುತ್ತೂರು | 1.65 | 1.82 | 0.17 |
| ದಾವಣಗೆರೆ | 1.74 | 1.70 | -0.04 |
| ಶಿವಮೊಗ್ಗ | 1.13 | 1.28 | 0.15 |
| ಚಿತ್ರದುರ್ಗ | 0.68 | 1.06 | 0.38 |
| **ಒಟ್ಟು** | **29.72** | **34.79** | **5.07** |
| ವಾ.ಕ.ರ.ಸಾ.ಸಂಸ್ಥೆ | | | |
| ಹುಬ್ಬಳ್ಳಿ (ಗ್ರಾ) | 1.27 | 1.75 | 0.48 |
| ಧಾರವಾಡ (ಗ್ರಾ) | 1.04 | 1.93 | 0.89 |
| ಹು-ಧಾ.ನಗರ ಸಾರಿಗೆ | 2.77 | 3.75 | 0.98 |
| ಬೆಳಗಾವಿ | 2.66 | 3.54 | 0.88 |
| ಚಿಕ್ಕೋಡಿ | 2.21 | 3.72 | 1.51 |
| ಬಾಗಲಕೋಟ | 2.11 | 3.17 | 1.06 |
| ಗದಗ | 1.77 | 2.26 | 0.49 |
| ಹಾವೇರಿ | 1.10 | 2.62 | 1.52 |
| ಉತ್ತರಕನ್ನಡ | 1.57 | 2.13 | 0.56 |
| **ಒಟ್ಟು** | **16.49** | **24.87** | **8.38** |
| ಕ.ಕ.ರ.ಸಾ.ನಿಗಮ | | | |
| ಕಲಬುರಗಿ-1 | 1.24 | 1.62 | 0.38 |
| ಕಲಬುರಗಿ-2 | 1.26 | 1.45 | 0.19 |
| ಯಾದಗಿರಿ | 1.12 | 1.20 | 0.08 |
| ರಾಯಚೂರು | 1.45 | 1.89 | 0.44 |
| ಬೀದರ್ | 1.47 | 2.07 | 0.6 |
| ಕೊಪ್ಪಳ | 1.49 | 1.73 | 0.24 |
| ಬಳ್ಳಾರಿ | 1.58 | 1.87 | 0.29 |
| ವಿಜಯಪುರ | 2.41 | 2.68 | 0.27 |
| ಹೊಸಪೇಟೆ | 1.56 | 2.45 | 0.89 |
| **ಒಟ್ಟು** | **13.58** | **16.97** | **3.39** |